ಓ. ಎಸ್ . 26/2016                    ಡಿ.ಡಬ್ಲ್ಯೂ - 5 ಹಸನ ಹಜರತ ಸುತಾರ

( ದಿನಾಂಕ 02-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು : ವಾದಿ ಪರ ಶ್ರೀ. ಕೆ ಬಿ ಕೆ ವಕೀಲರಿಂದ -**

1. ನಾನು 7ನೇ ತರಗತಿ ಓದಿರುತ್ತೇನೆ. ನನ್ನ ತಂದೆ ಹೆಸರು ಹಜರತ ಅಪ್ಪಾಸಾಬ ಸುತಾರ . ನನಗೆ ಪಾವರ ಆಫ್ ಅಟೋರ್ನಿ ಬರೆದುಕೊಟ್ಟವರು 5ನೇ ಪ್ರತಿವಾದಿ ಅಬ್ದುಲಖಾದರ ಮುನಿಶಿ . ಅವರು ನನ್ನ ಹೆಂಡತಿಯ ತಂದೆ. ಅಬ್ದುಲಖಾದರಗೆ ಗಂಡು ಮಕ್ಕಳು ಇರುತ್ತಾರೆ. ಅವರ ಮಕ್ಕಳು ಗೋಕಾಕ ಫಾಲ್ಸನಲ್ಲಿ ಇರುತ್ತಾರೆ. ಅಬ್ದುಲಖಾದರ ಇವರು ಈಗ ಹುಕ್ಕೇರಿಯಲ್ಲಿಯೇ ವಾಸವಾಗಿದ್ದಾರೆ. ಕಳೆದ 8-9 ವರ್ಷಗಳಿಂದ ಅವರು ಹುಕ್ಕೇರಿಯಲ್ಲಿ ವಾಸವಾಗಿದ್ದಾರೆ. ಅವರು ಗೋಕಾಕ ಫಾಲ್ಸನ ಮಿಲನಲ್ಲಿ ನೌಕರಿ ಮಾಡುತ್ತಿದ್ದರು. ಈಗಲೂ ಸಹ ಅವರು ತಮ್ಮ ತಮ್ಮ ಕೆಲಸವನ್ನು ಅವರೇ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಅವರಿಗೆ ಈಗ ವಯಸ್ಸಾಗಿದ್ದು , ಅವರಿಗೆ ನಡೆಯಲು ಆಗುವುದಿಲ್ಲ ಹಾಗೂ ಕಿವಿ ಕೇಳುವುದಿಲ್ಲ ಎಂದು ಹೇಳುತ್ತಾರೆ. ಆ ಬಗ್ಗೆ ನಾನು ದವಾಖಾನೆಯ ಕಾಗದ ಪತ್ರವನ್ನು ಹಾಜರ ಮಾಡಿಲ್ಲ.

2. ಈ ಕೇಸನ್ನು ಶರೀಫಾ ಇವರು ಅಲ್ಲಿ ಮನೆ ಕಟ್ಟಿದ ಎಲ್ಲರ ಮೇಲೆ ಮಾಡಿದ್ದಾರೆ. ನನಗೆ ಪ್ರತಿವಾದಿಗಳ ಎಲ್ಲರ ಹೆಸರು ಹೇಳಲು ಬರುವುದಿಲ್ಲ . ಸ್ವಲ್ಪ ಜನರ ಹೆಸರು ನೆನಪಿದೆ. ಅವರ ಹೆಸರು ಹೇಳುತ್ತೇನೆ. ದಾವಾ ಆಸ್ತಿ ಸರ್ವೆ ನಂ. 118 ಇರುತ್ತದೆ. ದಾವಾ ಆಸ್ತಿ ಸರ್ವೆ ನಂಬರ ಎಷ್ಟು ಎಕರೆ ಎಷ್ಟು ಗುಂಟೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರ ಬರೆಯಲು ನಾನು ಮತ್ತು ನನ್ನ ಮಾವ ಮಾಹಿತಿ ಕೊಟ್ಟಿರುತ್ತೇವೆ. ಸರ್ವೆ ನಂ. 118 ರಲ್ಲಿ ಎಷ್ಟು ಎಕರೆ ಎನ್ ಎ ಆಗಿದೆ ಎಂದರೆ ಸಾಕ್ಷಿ ಅದು ಪೂರಾ ಜಮೀನು ಎನ್ ಎ ಆಗಿದೆ, ಅಲ್ಲಿ ಯಾವುದೇ ಜಮೀನು ಉಳಿದಿಲ್ಲ ಎಂದು ಹೇಳುತ್ತಾರೆ.

3. ಸಿ ಟಿ ಎಸ್ ನಂ. 4335 ರಲ್ಲಿ ಎಷ್ಟು ಪ್ಲಾಟ ಆಗಿದೆ ಎಂದರೆ ಸಾಕ್ಷಿ ನನಗೆ ನನ್ನ ಪ್ಲಾಟ ಬಗ್ಗೆ ಮಾತ್ರ ಮಾಹಿತಿ ಇದೆ , ಬೇರೆಯದು ಗೊತ್ತಿಲ್ಲ ಎಂದು ಹೇಳುತ್ತಾರೆ. ಸಿ ಟಿ ಎಸ್ ನಂ. 4335(ಎ) ರಲ್ಲಿ ಎಷ್ಟು ಪ್ಲಾಟ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಖರೀದಿಗೆ ತೆಗೆದುಕೊಂಡಂತಹ ಸಿ ಟಿ ಎಸ್ ನಂಬರ ನನಗೆ ಹೇಳಲು ಬರುತ್ತದೆ. ಸಿ ಟಿ ಎಸ್ ನಂಬರ ನನಗೆ ನೆನಪಿಲ್ಲ ಆದರೆ ಪ್ಲಾಟ ನಂಬರ ನೆನಪಿದೆ. ಪ್ಲಾಟ ನಂ. 59 ಇರುತ್ತದೆ. ಸಿ ಟಿ ಎಸ್ ನಂ. 4335 ರಲ್ಲಿ 1 ರಿಂದ 46 ಪ್ಲಾಟಗಳು ಆಗಿವೆ ಎಂದರೆ ಸರಿಯಲ್ಲ. ಸಾಕ್ಷಿ 61 ಪ್ಲಾಟಗಳು ಆಗಿವೆ ಎಂದು ಹೇಳುತ್ತಾರೆ. ಪ್ಲಾಟ ನಂ. 59 ನ್ನು ಖರೀದಿ ಮಾಡುವ ಮುಂಚೆ ನನ್ನ ಮಾವ

ಎನ್ ಎ ಆರ್ಡರ ಮತ್ತು ಪ್ಲಾನ ನೋಡಿರಲಿಲ್ಲ , ಸಾಕ್ಷಿ ಏಸಿಯ ಕಾಫಿ ಹಾಗೂ ಉತಾರವನ್ನು ನೋಡಿದರು ಎಂದು ಹೇಳುತ್ತಾರೆ. ಪ್ಲಾಟ ನಂ. 59 ನ್ನು ಖರೀದಿ ಮಾಡುವ ಮುಂಚೆ ನನ್ನ ಮಾವನಿಗೆ ಎನ್ ಎ ಆರ್ಡರ ಮತ್ತು ಪ್ಲಾನ ನೋಡುೀ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆಜು ಬಾಜುದವರು ಎಲ್ಲಾ ತೆಗೆದುಕೊಳ್ಳುತ್ತಿದ್ದರು , ಆದ್ದರಿಂದ ಅದನ್ನು ನೋಡಲಿಲ್ಲ ಎಂದು ಹೇಳುತ್ತಾರೆ.

4. ನಾವು ಆ ಪ್ಲಾಟನ್ನು ಪ್ರಶಾಂತ ಶಂಕರ ಕೋರೆ ಇವರ ಕಡೆಯಿಂದ ಖರೀದಿ ಮಾಡಿದೆವು. ಆ ಪ್ಲಾಟ ಅವರ ಬ್ರದರ ಹೆಸರಿನಲ್ಲಿತು. ಅದನ್ನು ಪ್ರಶಾಂತ ಕೊಟ್ಟರು . ಎಷ್ಟ ಹಣಕ್ಕೆ ಖರೀದಿ ಆಗಿದೆ ಎಂದು ಈಗ ನನಗೆ ನೆನಪಿಲ್ಲ. ಯಾವ ತಾರೀಖು ತಿಂಗಳು ಖರೀದಿ ಆಗಿದೆ ಎಂದು ಈಗ ನನಗೆ ನೆನಪಿಲ್ಲ. ನನ್ನ ಮಾವನ ಹೆಸರಿನಲ್ಲಿರುವ ಮುನಸಿಪಾಲ್ಟಿ ಉತಾರನ್ನು ನ್ಯಾಯಾಲಯಕ್ಕೆ ಹಾಜರ ಮಾಡಿರುತ್ತೇನೆ. ಮುನಸಿಪಾಲ್ಟಿ ನಂಬರ ನನಗೆ ಹೇಳಲು ಬರುವುದಿಲ್ಲ. ಸಿಟಿಎಸ್ 4335(ಎ) ಉತಾರವನ್ನು ಹಾಜರ ಮಾಡಿದ್ದೇನೆ ಎಂದರೆ ನಿಜ. ಅದರಲ್ಲಿ 1 ರಿಂದ 47 ಪ್ಲಾಟ ಬಿದ್ದಿವೆ ಎಂದರೆ 61 ಪ್ಲಾಟ ಬಿದ್ದಿವೆ ಎಂದು ಹೇಳುತ್ತಾರೆ.

5. ಬ್ಯಾಂಕ ಲೋನ ತೆಗೆದುಕೊಳ್ಳುವಾಗ ಬ್ಯಾಂಕಿನವರು ಲೀಗಲ ಓಪಿನಿಯನ ಹಾಗೂ ಎನಕಂಬ್ರನ್ಸ ಸರ್ಟಿಫಿಕೇಟ ಹಾಗೂ ಇತರೆ ದಾಖಲೆಗಳನ್ನು ನೋಡಿ ಲೋನ ಕೊಡುತ್ತಾರೆ ಎಂದರೆ ನಿಜ. ಆ ಪ್ರಕಾರ ಪೂರ್ವ ಬದಿಯ 2 ಎಕರೆ ಎನ್ ಎ ಮಾಡಿದರು ಎಂರದೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2 ಎಕರೆಯ ಪಶ್ಚಿಮ ಬದಿಗೆ 30 ಗುಂಟೆ ಖಾಲಿ ಬಿಟ್ಟು ಅದರ ಪಶ್ಚಿಮಕ್ಕೆ 2 ಎಕರೆ 10 ಗುಂಟೆ ಎನ್ ಎ ಮಾಡಿದರು ಎಂದರೆ ನಿಜ. ಸಾಕ್ಷಿ 30 ಗುಂಟೆಯಲ್ಲಿ ನಮ್ಮ ಪ್ಲಾಟ ಇದೆ ಎಂದು ಹೇಳುತ್ತಾರೆ. 30 ಗುಂಟೆಯಲ್ಲಿಯೇ ನಮ್ಮ ಪ್ಲಾಟ ಬರುತ್ತದೆ ಎಂದು ತೋರಿಸಲು ನಾನು ದಾಖಲೆ ಹಾಜರ ಮಾಡಿಲ್ಲ. ಇದುವರೆಗೂ ಅದನ್ನು ಹಾಜರ ಮಾಡಿಲ್ಲ . ಸಾಕ್ಷಿ ತನ್ನ ಬಳಿ ಆ ದಾಖಲೆ ಇದೆ ಎಂದು ಹೇಳುತ್ತಾರೆ.

6. 2016 ಕ್ಕಿಂತ ಪೂರ್ವದಲ್ಲಿ ಶರೀಫಾ ನದಾಫ ಇವರು ಸರ್ವೆ ಮಾಡಲು ಅರ್ಜಿ ಹಾಕಿದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಸರ್ವೆ ನಂ. 118 ಅ/2 ರಂತೆ ಸರ್ವೆ ಇಲಾಹೆಯವರು ಪಿಟಿ ಶೀಟ ಮಾಡಿಕೊಟ್ಟಿದ್ದಾರೆ ಎಂದರೆ ಮಾಡಿರಬಹುದು. ಶರೀಫಾ ಏನು ದಾಖಲೆ ಹಾಜರ ಮಾಡಿದ್ದಾರೆ ಎಂದು ನಾನು ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ವಾದಪತ್ರದ ಜೊತೆಗೆ ಹಾಕಿದಂತಹ ಹಾತ್ ನಕಾಶೆಯನ್ನು ಈಗ ನೋಡುತ್ತಿದ್ದೇನೆ . ಸರ್ವೆ ನಂ. 118ಅ/2 ರ ಉತಾರ ಶರೀಫಾನ ಹೆಸರಿನಲ್ಲಿ ಈಗಲೂ ಇದೆ ಎಂದರೆ ನಿಜ. ಆ ಉತಾರದ

ಮೇಲೆ ಸಾಲ ಸಹ ಆಕೆ ತೆಗೆದುಕೊಂಡಿದ್ದಾಳೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಅವಳು ಪಾಳೆ ಕಟ್ಟುತ್ತ ಕಬ್ಜಾ ವ್ಯೆವಾಟು ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ಅವಳು ಕಬ್ಜಾ ವ್ಯೆವಾಟು ಮಾಡುತ್ತಿರುವುದು ಗೊತ್ತಿದ್ದರೂ ಸಹ ಅಲ್ಲಿ ಮನೆ ಕಟ್ಟಿಕೊಂಡು ನಾವು ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಮಾಡುವ ಮುಂಚೆಯೂ ಸಹ ಶರೀಫಾ ಬಂದು ನಮಗೆ ಈ 30 ಗುಂಟೆಯಲ್ಲಿ ಕಟ್ಟಿದ ಮನೆಗಳನ್ನು ತೆರವು ಮಾಡಬೇಕೆಂದು ನನಗೆ ಕೇಳಿದ್ದಳು ಎಂದರೆ ಸರಿಯಲ್ಲ.

7. ಅಲ್ಲಿ ಕಟ್ಟಿದ ಮನಗೆಳನ್ನು ತೆರವು ಮಾಡಬೇಕು ಎಂದು ಹಾಗೂ ಕಬ್ಜಾಕ್ಕೆ ಹರಕತ್ ಮಾಡಬಾರದು ಎಂದು ಆಕೆ ದಾವೆ ಮಾಡಿದ್ದಾಳೆ ಎಂದರೆ ಸರಿಯಲ್ಲ. ಈಗಲೂ ದಾವಾ ಆಸ್ತಿ ಯನ್ನು ಕೋರ್ಟ ವತಿಯಿಂದ ಅಳತೆ ಮಾಡಲು ನನ್ನ ತಕರಾರು ಇರುವುದಿಲ್ಲ. ನನ್ನ ಮಾವ ಚನ್ನಾ ಗಿದ್ದರೂ ಸಹ ಆತ ಕೋರ್ಟ ಮುಂದೆ ಬಂದರೆ ನಿಜ ಸ್ಥಿತಿ ಗೊತ್ತಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**( ಸಾಕ್ಷಿ ಯ ಹೇಳಿಕೆಯನ್ನು ತೆರೆದ ನ್ಯಾ ಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ